# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2245 |
| ಸದಸ್ಯರ ಹೆಸರು | : | ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 26.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ಗೊರೂರು ವಲಯದ ಕಾವೇರಿ ನೀರಾವರಿ ನಿಗಮ ಲಿಮಿಟೆಡ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಲಿಫ್ಟ್ ಇರಿಗೇಷನ್ ಯೋಜನೆಗಳು ಹೆಚ್ಚಿನ ವಾರ್ಷಿಕ ವಿದ್ಯುತ್ ವೆಚ್ಚವನ್ನು ಭರಿಸುತ್ತಿರುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ;</td><td>ಕಾವೇರಿ ನೀರಾವರಿ ನಿಗಮದ ಹೇಮಾವತಿ ಯೋಜನಾ ವಲಯ, ಗೊರೂರು ವ್ಯಾಪ್ತಿಯಲ್ಲಿ 21 ಸಂಖ್ಯೆಯ ಏತ ನೀರಾವರಿ ಯೋಜನೆಗಳು ಹಾಗೂ 10 ಸಂಖ್ಯೆಯ ಕುಡಿಯುವ ನೀರಿಗಾಗಿ ಕೆರೆ ತುಂಬಿಸುವ ಯೋಜನೆಗಳು ಕಾರ್ಯನಿರ್ವಹಿಸುತ್ತಿವೆ.<br><br>ಸದರಿ ಯೋಜನೆಗಳ ಚಾಲನಾ ಅವಧಿಯಲ್ಲಿನ ವಿದ್ಯುತ್ ಬಳಕೆಗಾಗಿ ಹಾಗೂ ಚಾಲನಾರಹಿತ ಅವಧಿಗಾಗಿ ವಿದ್ಯುತ್ ಪೂರೈಸುತ್ತಿರುವ ವಿದ್ಯುತ್ ಸರಬರಾಜು ಕಂಪನಿಗಳಿಂದ ನೀಡಲಾಗುವ ಬಿಲ್‌ಗಳಿಗೆ ಅನುಗುಣವಾಗಿ ವಿದ್ಯುತ್ ವೆಚ್ಚವನ್ನು ಭರಿಸಲಾಗುತ್ತಿದೆ.</td></tr>
<tr><td>ಆ)</td><td>ಕಳೆದ 3 ವರ್ಷಗಳಲ್ಲಿ ಗೊರೂರು ವಲಯದ ಲಿಫ್ಟ್ ಇರಿಗೇಷನ್ ಯೋಜನೆಗಳ ಒಟ್ಟು ವಾರ್ಷಿಕ ವಿದ್ಯುತ್ ಬಳಕೆ ಮತ್ತು ವೆಚ್ಚ ಎಷ್ಟು;</td><td>ಕಳೆದ 3 ವರ್ಷಗಳಲ್ಲಿ ಈ ಯೋಜನೆಗಳ ಒಟ್ಟು ವಿದ್ಯುತ್ ಬಳಕೆ ಹಾಗೂ ವೆಚ್ಚದ ವಿವರಗಳು ಈ ಕೆಳಗಿನಂತಿವೆ:
<table>
<tr><th>ಕ್ರ. ಸಂ.</th><th>ವರ್ಷ</th><th>ವಿದ್ಯುತ್ ಬಳಕೆ (KWh)</th><th>ವಿದ್ಯುತ್ ವೆಚ್ಚ (ರೂ. ಲಕ್ಷಗಳಲ್ಲಿ)</th></tr>
<tr><td>1</td><td>2023-24</td><td>2,80,98,159</td><td>2842.98</td></tr>
<tr><td>2</td><td>2024-25</td><td>3,14,85,661</td><td>3810.35</td></tr>
<tr><td>3</td><td>2025-26</td><td>3,88,09,807</td><td>4984.33</td></tr>
</table></td></tr>
<tr><td>ಇ)</td><td>ಆಳಗೊಂಡನಹಳ್ಳಿ ಲಿಫ್ಟ್ ಇರಿಗೇಷನ್ ಯೋಜನೆ, ಕಾಚೇನಹಳ್ಳಿ ಲಿಫ್ಟ್ ಇರಿಗೇಷನ್ ಯೋಜನೆ, ಹುಚ್ಚನಕೊಪ್ಪಲು ಲಿಫ್ಟ್ ಇರಿಗೇಷನ್ ಯೋಜನೆ, ಕಾಮಸಮುದ್ರ ಲಿಫ್ಟ್ ಇರಿಗೇಷನ್ ಯೋಜನೆ ಮತ್ತು ಗುಡ್ಡಹಳ್ಳಿ ಲಿಫ್ಟ್ ಇರಿಗೇಷನ್ ಯೋಜನೆಗಳ ಸೌರೀಕರಣದ ಸಾಧ್ಯತೆಯನ್ನು ಸರ್ಕಾರ ಪರಿಶೀಲಿಸಿರುವುದೇ;</td><td rowspan="2">ಜಲಸಂಪನ್ಮೂಲ ಇಲಾಖೆಯಡಿ ನಾಲ್ಕು ನಿಗಮಗಳ ಅಡಿಯಲ್ಲಿ ಕೈಗೆತ್ತಿಕೊಂಡಿರುವ ಏತ ನೀರಾವರಿ/ ಕುಡಿಯುವ ನೀರಿನ ಯೋಜನೆಗಳ ನಿರ್ವಹಣೆಗಾಗಿ ಹಾಗೂ ವಿದ್ಯುತ್ ವೆಚ್ಚವನ್ನು ಭರಿಸಲು ಅವಶ್ಯವಿರುವ ಅನುದಾನಕ್ಕಿಂತ ಆಯವ್ಯಯದಲ್ಲಿ ಹಂಚಿಕೆ ಮಾಡಲಾಗುತ್ತಿರುವ ಅನುದಾನವು ತೀರಾ ಕಡಿಮೆಯಾಗಿರುತ್ತದೆ.<br><br>ಆದುದರಿಂದ ಏತ ನೀರಾವರಿ/ ಕುಡಿಯುವ ನೀರಿನ ಯೋಜನೆಗಳ ಸಮರ್ಪಕ ನಿರ್ವಹಣೆಗಾಗಿ ವಿದ್ಯುತ್ ವೆಚ್ಚವನ್ನು ಸರಿದೂಗಿಸಲು ಸೋಲಾರ್ ಪಾರ್ಕ್ ಅನ್ನು ಸ್ಥಾಪಿಸಲು ಇಲಾಖೆಯ ವಿವಿಧ ನಿಗಮಗಳಾದ ಕೃಷ್ಣಾ ಭಾಗ್ಯ ಜಲ ನಿಗಮ, ಕರ್ನಾಟಕ ನೀರಾವರಿ ನಿಗಮ, ಕಾವೇರಿ ನೀರಾವರಿ ನಿಗಮ ಮತ್ತು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಗಳನ್ನು ಒಳಗೊಂಡ ಜಂಟಿ ಸಹಭಾಗಿತ್ವ ಸಂಸ್ಥೆಯನ್ನು ರಚಿಸಲು ದಿನಾಂಕ:15.03.2024ರ ಆದೇಶದಲ್ಲಿ ಅನುಮೋದನೆ ನೀಡಲಾಗಿದೆ.</td></tr>
<tr><td>ಈ)</td><td>ಮೇಲ್ಕಂಡ ಯೋಜನೆಗಳಿಗೆ ಸಂಬಂಧಿಸಿದಂತೆ ಮುಖ್ಯ ಅಭಿಯಂತರರು ಅಥವಾ ವ್ಯವಸ್ಥಾಪಕ ನಿರ್ದೇಶಕರು ಸರ್ಕಾರಕ್ಕೆ ಯಾವುದೇ ಸೌರ ವಿದ್ಯುತ್ ಏಕೀಕರಣ ಪ್ರಸ್ತಾವನೆ ಸಲ್ಲಿಸಿದ್ದಾರೆಯೇ;</td></tr>
</table>

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಉ) | ಈ ಯೋಜನೆಗಳ ವಿದ್ಯುತ್ ವೆಚ್ಚವನ್ನು ಕಡಿಮೆ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆ? | ಅದರಂತೆ, **"ಕರ್ನಾಟಕ ನೀರಾವರಿ ಸೌರ ಯೋಜನೆ ನಿಯಮಿತ (KNSYN)"** ಅನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಯನ್ನಾಗಿ ದಿನಾಂಕ:27.08.2025 ರಂದು ಸ್ಥಾಪಿಸಲಾಗಿರುತ್ತದೆ. ನಿಗಮಗಳ ಮಾಲೀಕತ್ವದಲ್ಲಿರುವ ಅನುಪಯುಕ್ತ ಭೂಮಿಯಲ್ಲಿ ಸೋಲಾರ್ ಪಾರ್ಕ್ ಸ್ಥಾಪನೆಗಾಗಿ ಪ್ರಸ್ತಾವನೆಯನ್ನು ಸಿದ್ಧಪಡಿಸಲು ಕ್ರಮ ಜರುಗಿಸಲಾಗುತ್ತಿದೆ. ಇದರಡಿ ಉತ್ಪಾದನೆಯಾಗುವ ಸೌರ ವಿದ್ಯುತ್‌ನಿಂದ ನಿಗಮಗಳಡಿಯಲ್ಲಿನ ಯೋಜನೆಗಳಿಗೆ ವಿದ್ಯುತ್‌ಶಕ್ತಿ ಪೂರೈಸಬಹುದಾಗಿದೆ ಹಾಗೂ ವಿದ್ಯುತ್ ಬಿಲ್ ಪಾವತಿ ಮೊತ್ತವನ್ನು ಕಡಿತಗೊಳಿಸಬಹುದಾಗಿರುತ್ತದೆ. ಇದಲ್ಲದೆ, ಸ್ವಚ್ಛ ವಿದ್ಯುತ್ ಉತ್ಪಾದನೆಯ ಮೂಲಕ ಹವಾಮಾನ ಸಂರಕ್ಷಣೆಗೆ ಸಹಕಾರಿಯಾಗಲಿದೆ. |

ಸಂ : ಜಸಂಇ 38 ಎನ್‌ಎಲ್‌ಎ 2026

**(ಡಿ. ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿ**